# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1030
ಸದಸ್ಯರ ಹೆಸರು : ಶ್ರೀ.ವೈ ಎಂ.ಸತೀಶ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 12.03.2026
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟ್‌ಗಳ ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿರುವುದು ನಿಜವೇ; ಹಾಗಿದ್ದಲ್ಲಿ ಈ ಕಾರ್ಯ ಯಾವ ಹಂತದಲ್ಲಿದೆ; ಈ ಕ್ರಸ್ಟ್ ಗೇಟ್ ಅಳವಡಿಕೆ ಕಾರ್ಯಕ್ರಮಕ್ಕೆ ಭಾಗವಹಿಸುವ ರಾಜ್ಯಗಳು ನೀಡಬೇಕಾಗಿದ್ದ ಅನುದಾನ ಎಷ್ಟು; ಈಗಾಗಲೇ ಅನುದಾನವನ್ನು ತುಂಗಭದ್ರಾ ಜಲಾಶಯ ಮಂಡಳಿಗೆ ನೀಡಿರುವ ರಾಜ್ಯಗಳು ಯಾವುವು; ಎಷ್ಟು ಎಷ್ಟು ಅನುದಾನಗಳನ್ನು ಯಾವ ದಿನಾಂಕಗಳಲ್ಲಿ ನೀಡಲಾಗಿದೆ; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ತುಂಗಭದ್ರಾ ಯೋಜನೆಯು ಅಂತರ ರಾಜ್ಯ (ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ) ಯೋಜನೆಯಾಗಿದ್ದು, ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ನಿರ್ವಹಣೆಯು ತುಂಗಭದ್ರಾ ಮಂಡಳಿ (TB Board)ಯ ವ್ಯಾಪ್ತಿಯಲ್ಲಿರುತ್ತದೆ.<br><br>ತುಂಗಭದ್ರಾ ಜಲಾಶಯದ ಗೇಟುಗಳನ್ನು ಬದಲಾಯಿಸುವ ಸಂಬಂಧದಲ್ಲಿ ತುಂಗಭದ್ರಾ ಮಂಡಳಿಯು ಈ ಕೆಳಕಂಡಂತೆ ಕ್ರಮ ವಹಿಸಿರುತ್ತದೆ:<br><br>• ಆಗಸ್ಟ್-2024ರಲ್ಲಿ ಕೊಚ್ಚಿಹೋದ ಗೇಟ್ ನಂ.19ಕ್ಕೆ ಹೊಸ ಗೇಟನ್ನು ಅಳವಡಿಸುವಿಕೆ ಕಾಮಗಾರಿ ಹಾಗೂ ಬಾಕಿ 32 ಗೇಟುಗಳನ್ನು ಬದಲಾಯಿಸುವ ಕಾಮಗಾರಿಯನ್ನು M/s Hardware Tools & Machinary Projects Pvt. Ltd, Ahmedabad ಇವರಿಗೆ ಪ್ರತ್ಯೇಕವಾಗಿ ಕ್ರಮವಾಗಿ ರೂ.1.66 ಕೋಟಿ ಮತ್ತು ರೂ.34.48 ಕೋಟಿಗಳಿಗೆ ಗುತ್ತಿಗೆ ವಹಿಸಲಾಗಿದೆ.<br><br>• ಎಲ್ಲಾ 33 ಗೇಟುಗಳ ಬದಲಾಯಿಸುವ ಕಾಮಗಾರಿಗಳ ಪ್ರಸ್ತುತ ಹಂತ ಈ ಕೆಳಕಂಡಂತಿದೆ:<br>  ◦ 33 ಗೇಟುಗಳ fabricationಗೆ ಅಗತ್ಯವಿರುವ materialಗಳನ್ನು procure ಮಾಡಲಾಗಿದ್ದು, 25 ಗೇಟುಗಳ fabrication ಪೂರ್ಣಗೊಂಡಿರುತ್ತದೆ. 2 ಗೇಟುಗಳ fabrication ಪ್ರಗತಿಯಲ್ಲಿದೆ.<br>  ◦ 26 ಗೇಟುಗಳನ್ನು dismantle ಮಾಡಲಾಗಿದ್ದು, 2 ಗೇಟುಗಳ dismantling ಕಾರ್ಯ ಪ್ರಗತಿಯಲ್ಲಿದೆ.<br>  ◦ 16 ಗೇಟುಗಳ erection ಮಾಡಲಾಗಿದ್ದು, 3 ಗೇಟುಗಳ erection ಕಾರ್ಯ ಪ್ರಗತಿಯಲ್ಲಿದೆ.<br><br>ಸದರಿ ಕಾಮಗಾರಿಯ ಪ್ರಗತಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ತುಂಗಭದ್ರಾ ಮಂಡಳಿಯೊಂದಿಗೆ ನಿರಂತರವಾಗಿ ಅನುಸರಣೆ ಮಾಡುತ್ತಿದ್ದು, ಮುಂಗಾರು ಹಂಗಾಮಿನಲ್ಲಿ ಬೆಳೆಗಳಿಗೆ ನೀರೊದಗಿಸಲು ಅನುಕೂಲವಾಗುವಂತೆ ಗೇಟುಗಳ ಬದಲಾವಣೆ ಕಾರ್ಯವನ್ನು ಆದ್ಯತೆ ಮೇರೆಗೆ ಮೇ-2026ರೊಳಗಾಗಿ ಪೂರ್ಣಗೊಳಿಸುವಂತೆ ತುಂಗಭದ್ರಾ ಮಂಡಳಿಯನ್ನು ಕೋರಲಾಗಿದೆ. |
| ಆ) | ಕರ್ನಾಟಕ ರಾಜ್ಯದ ಪಾಲನ್ನು ರಾಜ್ಯ ಸರ್ಕಾರವು ಮೊದಲ ಕಂತಾಗಿ ನೀಡಿದ್ದ ರೂ.10.00 ಕೋಟಿಗಳನ್ನು ನೀಡಿ ವಾಪಸ್ಸು ಪಡೆದಿರುವುದು; ನಿಜವೇ ಹಾಗಿದ್ದಲ್ಲಿ ಯಾವ ಕಾರಣದಿಂದ ವಾಪಸ್ ಪಡೆಯಲಾಗಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು) | |
| ಇ) | ನೀಡಿರುವ ಹಣವನ್ನು ವಾಪಸ್ ಪಡೆಯಲಾಗಿಲ್ಲದಿದಲ್ಲಿ ಈ ಗೊಂದಲ ಉಂಟಾಗಲು ಕಾರಣವೇನು.? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಸದರಿ ಯೋಜನೆಯ ವೆಚ್ಚದಲ್ಲಿ ಕರ್ನಾಟಕ ಹಾಗೂ ಆಂಧ್ರಪ್ರದೇಶ ಸರ್ಕಾರಗಳು ಈ ಕೆಳಕಂಡಂತೆ ಅನುದಾನ ಭರಿಸುತ್ತವೆ.<br><br>ವಿಭಾಗ / ಆಂಧ್ರಪ್ರದೇಶ / ಕರ್ನಾಟಕ<br>ಬಲದಂಡೆ- ಹೈಲೆವೆಲ್ ಕಾಲುವೆ / 71% / 29%<br>ಬಲದಂಡೆ- ಲೋಲೆವೆಲ್ ಕಾಲುವೆ / 55.56% / 44.44%<br><br>ಈ ಯೋಜನೆಗೆ ವಾರ್ಷಿಕವಾಗಿ ಅಗತ್ಯವಿರುವ ಒಟ್ಟಾರೆ ಅನುದಾನವನ್ನು ಪ್ರತಿ ವರ್ಷವೂ ಆಂಧ್ರಪ್ರದೇಶ ಸರ್ಕಾರದಿಂದ ಆಯವ್ಯಯದಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಈ ರೀತಿ ಹಂಚಿಕೆ ಮಾಡಲಾದ ಅನುದಾನವನ್ನು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಕರ್ನಾಟಕ ಸರ್ಕಾರಕ್ಕೆ ತಿಳಿಸಲಾಗುತ್ತದೆ. ಅದರಂತೆ, ತುಂಗಭದ್ರಾ ಮಂಡಳಿಯಡಿ ಯೋಜನೆಗೆ ಪ್ರತೀ ತಿಂಗಳ ಸಂಪೂರ್ಣ ವೆಚ್ಚವನ್ನು ಕರ್ನಾಟಕ ಸರ್ಕಾರದಿಂದ ಹೊಸಪೇಟೆ ಉಪ ಖಜಾನೆ ಮತ್ತು ಬಳ್ಳಾರಿ ಜಿಲ್ಲಾ ಖಜಾನೆ ಮೂಲಕ ಭರಿಸಲಾಗುತ್ತಿದೆ. ಅಂದರೆ ಆಂಧ್ರ ಪ್ರದೇಶದ ಅನುದಾನದ ಪಾಲನ್ನೂ ಸಹ ಕರ್ನಾಟಕ ಸರ್ಕಾರದಿಂದ ಮುಂಗಡವಾಗಿ ಭರಿಸಲಾಗುತ್ತಿದೆ.<br><br>ಈ ರೀತಿ ವೆಚ್ಚ ಭರಿಸಿದ ನಂತರ, ವೆಚ್ಚ ಮತ್ತು ಸ್ವೀಕೃತಿ ವೌಚರ್‌ಗಳನ್ನು ಬಳ್ಳಾರಿ ಜಿಲ್ಲಾ ಖಜಾನೆಗೆ ಕಳುಹಿಸಲಾಗುತ್ತದೆ. ಅಲ್ಲಿಂದ ಅವುಗಳನ್ನು ಮಹಾಲೇಖಪಾಲರ ಕಚೇರಿ (A&E), ಆಂಧ್ರ ಪ್ರದೇಶಕ್ಕೆ ರವಾನಿಸಲಾಗುತ್ತಿದ್ದು, ಅಲ್ಲಿ ವೆಚ್ಚವನ್ನು ಯೋಜನೆಯಡಿ ನಿಗದಿಪಡಿಸಿದ ಅನುಪಾತದ ಪ್ರಕಾರ ಕರ್ನಾಟಕ ಹಾಗೂ ಆಂಧ್ರ ಪ್ರದೇಶಕ್ಕೆ ಬೇರ್ಪಡಿಸಲಾಗುತ್ತದೆ. ತದನಂತರ, ಆಂಧ್ರ ಪ್ರದೇಶ ಸರ್ಕಾರದಿಂದ ತನ್ನ ಪಾಲಿನ ಅನುದಾನವನ್ನು ಕರ್ನಾಟಕ ಸರ್ಕಾರಕ್ಕೆ ಹಿಂಬರಿಸಲಾಗುತ್ತಿದೆ.<br><br>ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ಬದಲಾವಣೆ ಕಾಮಗಾರಿಯ ತುರ್ತು ಅಗತ್ಯತೆಯನ್ನು ಮನಗಂಡು ಮತ್ತು ಅನುಷ್ಠಾನದಲ್ಲಿ ಯಾವುದೇ ವಿಳಂಬವಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ, ಆಂಧ್ರಪ್ರದೇಶದ ಆಯವ್ಯಯದಲ್ಲಿ ಹಂಚಿಕೆಯಾಗದಿದ್ದರೂ ಸಹ ಆಂಧ್ರ ಪ್ರದೇಶ ಸರ್ಕಾರದಿಂದ ಬಿಡುಗಡೆಯಾಗುವ ಮುಂದಿನ ಕಂತಿನ ಅನುದಾನದಲ್ಲಿ ಸರಿದೂಗಿಸಿಕೊಳ್ಳುವ ಷರತ್ತಿಗೊಳಪಟ್ಟು ಕರ್ನಾಟಕ ಸರ್ಕಾರದಿಂದ ದಿನಾಂಕ:08.12.2025ರಂದು ರೂ.10.00 ಕೋಟಿಗಳನ್ನು ಮುಂಗಡವಾಗಿ ಬಿಡುಗಡೆ ಮಾಡಲಾಗಿತ್ತು.<br><br>ತದನಂತರ ಆಂಧ್ರ ಪ್ರದೇಶ ಸರ್ಕಾರದಿಂದ ರೂ.35.62 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ಹಂಚಿಕೆಯಲ್ಲಿ ಕರ್ನಾಟಕದಿಂದ ಮುಂಗಡವಾಗಿ ಭರಿಸಿದ ರೂ.10.00 ಕೋಟಿ ವೆಚ್ಚವನ್ನು ಕಡಿತಗೊಳಿಸಿ, ರೂ.25.62 ಕೋಟಿಗಳ ವೆಚ್ಚ ಭರಿಸಲು ಪರಿಶೀಲಿಸಲಾಗಿತ್ತು. ಆದರೆ, ತುರ್ತು ಅಗತ್ಯತೆಯನ್ನು ಮನಗಂಡು ಸಂಪೂರ್ಣ ಅನುದಾನ ರೂ.35.62 ಕೋಟಿಗಳನ್ನು ವೆಚ್ಚ ಭರಿಸಲು ಅನುದಾನ ಬಿಡುಗಡೆಗೊಳಿಸಲಾಗಿದೆ. ಕರ್ನಾಟಕದಿಂದ ಈಗಾಗಲೇ ಮುಂಗಡವಾಗಿ ಭರಿಸಿರುವ ರೂ.10.00 ಕೋಟಿಗಳನ್ನು ಮುಂದಿನ ದಿನಗಳಲ್ಲಿ ಹಂಚಿಕೆಯಾಗುವ ಆಯವ್ಯಯದಿಂದ ಪಡೆಯಲಾಗುವುದು. |

ಜಸಂಇ 35 ಎಂಎಲ್ ಎ 2026

(ಡಿ.ಕೆ.ಶಿವಕುಮಾರ್)
ಉಪಮುಖ್ಯಮಂತ್ರಿ